ಕನ್ನಡಪ್ರಭ

Wednesday, December 7, 2011

# ಮ್ಯಾನೇಜ್‌ಮೆಂಟ್ ಸ್ಟಡೀಸ್ ಉತ್ಸವ

**ಬೆಂಗಳೂರು:** ಶೈಕ್ಷಣಿಕ ಮತ್ತು ಮನರಂಜನೆಯಲ್ಲಿ ವೈಯಕ್ತಿಕ ಶ್ರೇಷ್ಠತೆ ಪರಿಶೋಧಿಸುವ ಉದ್ದೇಶದಿಂದ ಜೈನ್ ವಿಶ್ವವಿದ್ಯಾಲಯ ಜ.6ರಿಂದ ಫೆ.24ರವರೆಗೆ ಸೆಂಟರ್ ಫಾರ್ ಮ್ಯಾನೇಜ್‌ಮೆಂಟ್ ಸ್ಟಡೀಸ್ ಉತ್ಸವವನ್ನು ಆಯೋಜಿಸಿದೆ.

ಉತ್ಸವವನ್ನು ಅಭಿನಯ, ತ್ರೆಶೋಲ್ಡ್(ಪ್ರಥಮ ವರ್ಷದ ಮ್ಯಾನೇಜ್‌ಮೆಂಟ್ ಉತ್ಸವ), ಸಾಂಸ್ಕೃತಿಕ ಉತ್ಸವ ಮತ್ತು ಪ್ರೆಸಿಪಿಸ್(ಅಂತಾರಾಷ್ಟ್ರೀಯ ಮ್ಯಾನೇಜ್‌ಮೆಂಟ್ ಉತ್ಸವ) ಎಂದು ನಾಲ್ಕು ವಿಭಾಗಗಳಾಗಿ ವಿಂಗಡಿಸಲಾಗಿದೆ.

**ಅಭಿನಯ:** ಕನ್ನಡ ಮತ್ತು ಹಿಂದಿ ನಾಟಕಗಳ ಸ್ಪರ್ಧೆ, ಕಲಾವಿದರ ನಟನಾ ಸಾಮರ್ಥ್ಯ, ರಂಗಭೂಮಿ ಉತ್ಸವ.

**ತ್ರೆಶೋಲ್ಡ್:** ಪ್ರಥಮ ವರ್ಷದ ಬಿಬಿಎಂ ವಿದ್ಯಾರ್ಥಿಗಳಿಗೆ ರಾಷ್ಟ್ರೀಯ ರಂಗಭೂಮಿ ಉತ್ಸವ, ವ್ಯವಹಾರ ಜಗತ್ತಿನ ಅಸಂಪ್ರದಾಯಿಕ ಶೈಲಿ, ವಸ್ತು ನಿಷ್ಠತೆ.

**ಲಾಸ್ಯ:** ಸಾಂಸ್ಕೃತಿಕ ಕಾರ್ಯಕ್ರಮ.

**ಪ್ರೆಸಿಪಿಸ್:** ಅಂತಾರಾಷ್ಟ್ರೀಯ ಮ್ಯಾನೇಜ್‌ಮೆಂಟ್ ಉತ್ಸವದಲ್ಲಿ ಇಟಲಿಯ ಮಿಲಾನ್‌ಗೆ ಒಂದು ವಾರಗಳ ಕಾಲ ಪ್ರವಾಸ ಆಯೋಜಿಸಲಾಗಿದೆ. ನಿರ್ವಹಣಾ ವಿದ್ಯಾರ್ಥಿಗೆ ಉದ್ಯಮದ ಶ್ರೇಷ್ಠ ಹಂತವನ್ನು ತಲುಪಲು ಅಂತರಾಷ್ಟ್ರೀಯ ವೇದಿಕೆಯಾಗಲಿದೆ ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ. ಮಾಹಿತಿಗಾಗಿ ದೂ. 9880616000 ನ್ನು ಸಂಪರ್ಕಿಸಬಹುದಾಗಿದೆ.